ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/53/2015-16** ದಿ: 19.5.2016

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

| ವಾದಿಗಳು | ಪ್ರತಿವಾದಿಗಳು |
|---|---|
| 2) ದೀಕ್ಷಿತ್ ಲಮಾಣಿ ಉರ್ಫ್<br>ದೀಕ್ಷಿತ್ ರಾಠೋಡ್ M/G<br>ತಾಯಿ ಪುಷ್ಪಾವತಿ<br>ಗಂಡ ಚಂದ್ರಶೇಖರ ಲಮಾಣಿ<br>ಗ್ರಾಮ : ಶಿರಹಟ್ಟಿ | 1) ಎಲ್.ಎನ್.ಸುನೀಲ<br>ತಂದೆ ದಿ॥ ಆರ್.ನಾಗರಾಜ<br>ಗ್ರಾಮ : ಹಂಪಸಾಗರ |

ವಿಷಯ : - **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 215/A ಪೈಕಿ ವಿಸ್ತೀರ್ಣ 5-89, ಸ.ನಂ. 217/B/1 ವಿಸ್ತೀರ್ಣ 3-38 ಎಕರೆ ಜಮೀನುಗಳು ವಿಲ್ ನೊಂದಣಿ ದಸ್ತಾವೇಜು ಸಂಖ್ಯೆ 15/ದಿನಾಂಕ: 27-08-2015 ರಂತೆ ಆದ ದಸ್ತಾವೇಜು ಪ್ರಕಾರ ವಾದಿಗಳ ಹೆಸರಿನಲ್ಲಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು -ವಿಚಾರಣೆ.**

## ಪೀಠಿಕೆ :-

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನುಗಳು ಸ.ನಂ. 215/A ಪೈಕಿ ವಿಸ್ತೀರ್ಣ 5-89, ಸ.ನಂ. 217/B/1 ವಿಸ್ತೀರ್ಣ 3-38 ಎಕರೆ ಜಮೀನು ನೊಂದಾಯಿತ ವಿಲ್ ದಸ್ತಾವೇಜು ಸಂಖ್ಯೆ 15/ದಿನಾಂಕ: 27-08-2015 ರಂತೆ ವಾದಿಗಳ ಹೆಸರಿನಲ್ಲಿ ನೊಂದಣಿಯಾಗಿರುತ್ತದೆ. ವಿಲ್ ಬರೆಸಿ ಇಟ್ಟವರು ದಿನಾಂಕ: 26-09-2015 ರಂದು ಮರಣ ಹೊಂದಿರುತ್ತಾರೆ. ವಿಲ್‌ದಾರರು ಮರಣ ಪತ್ರ ಹಾಗೂ ವಿಲ್ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಹೊಂದಲು ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಅರ್ಜಿಯು ಭೂಮಿ ಕೇಂದ್ರದಲ್ಲಿ ವಹಿವಾಟು ಸಂಖ್ಯೆ 91 ಹಾಗೂ ಎಂ.ಆರ್. ಸಂಖ್ಯೆ ಹೆಚ್-49/15-16 ರಂತೆ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ಹಕ್ಕು ಬದಲಾವಣೆ ಕ್ರಮಕ್ಕಾಗಿ ರವಾನಿಸಲಾಗಿರುತ್ತದೆ. ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರು ಸದರಿ ನೋಟೀಸುಗಳನ್ನು ಗ್ರಾಮ ಲೆಕ್ಕಾಧಿಕಾರಿ ಹಂಪಸಾಗರ ಇವರ ದ್ವಾರ ಜಾರಿ

L.N.Sunil
26/05/16

ಮಾಡಿರುತ್ತಾರೆ. ಜಾರಿ ಮಾಡಲಾಗಿ ಸದರಿ ಪ್ರಕರಣಕ್ಕೆ ಪ್ರತಿವಾದಿ ತಮ್ಮ ಲಿಖಿತ ತಕರಾರನ್ನು ಭೂಮಿ ಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 5534/2015 ರಂತೆ ದಾಖಲಾಗಿರುತ್ತದೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರು ಸದರಿ ಪ್ರಕರಣವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ಈ ನ್ಯಾಯಾಲಯದಲ್ಲಿ ದಿನಾಂಕ: 21-03-2016 ರಿಂದ 19-05-2016 ರವರೆಗೆ ವಿಚಾರಣೆ ನಡೆಸಲಾಯಿತು. ಪ್ರಥಮವಾಗಿ ವಿಚಾರಣೆಯಲ್ಲಿ ರಾಮಪ್ಪ ಲಮಾಣಿ ಹಾಜರಾಗಿದ್ದು ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುವುದಿಲ್ಲ. ಹಾಗೂ ವಾದಿ ಪ್ರತಿವಾದಿಗಳ ಪರವಾಗಿ ಯಾರೂ ನ್ಯಾಯವಾದಿಗಳನ್ನು ನೇಮಕ ಮಾಡಿಕೊಂಡಿರುವುದಿಲ್ಲ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಹಾಲೀ ಪಹಣಿ ದಾಖಲು ನಾಗರಾಜ. ಆರ್ ತಂದೆ ರೇಖಾನಾಯ್ಕ ಇವರ ಹೆಸರಿನಲ್ಲಿದ್ದು ಇವರಿಗೆ ಸದರಿ ಆಸ್ತಿಯು ಎಂ.ಆರ್.ನಂ. 49/2010-2011/ದಿನಾಂಕ: 05-01-2011 ರಂತೆ ಕ್ರಯದ ಪ್ರಕಾರ ಬಂಧಂಥ ಆಸ್ತಿಯಾಗಿರುವುದು ಪಹಣಿ ದಾಖಲೆಯಿಂದ ಕಂಡು ಬರುತ್ತದೆ.ಈ ಪ್ರಕಾರ ಸದರಿಯವರು ವಿಲ್ ದಸ್ತಾವೇಜು ಸಂಖ್ಯೆ 15/ ದಿನಾಂಕ: 27-08-2015 ರಂತೆ ವಾದಿಗಳಿಗೆ ನೊಂದಾಯಿತ ವಿಲ್ ಮಾಡಿಸಿರುತ್ತಾರೆ. ನಂತರ ಸದರಿಯವರು ದಿನಾಂಕ: 26-09-2015 ರಂದು ಮರಣ ಹೊಂದಿದ್ದು ಪೂರಕವಾಗಿ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತಾರೆ ಮತ್ತು ವಿಲ್ ಪ್ರಕಾರ ಮರಣಾನಂತರ ಹಕ್ಕು ಬದಲಾವಣೆಗೆ ಅರ್ಜಿ ಮಾಡಿಕೊಂಡಿರುತ್ತಾರೆ.

ಪ್ರತಿವಾದಿಗಳು ತಮ್ಮ ತಕರಾರನ್ನು ಭೂಮಿ ಕೇಂದ್ರದಲ್ಲಿ ದಾಖಲಿಸಿಕೊಂಡಿದ್ದು ಇದನ್ನು ಪರಿಶೀಲಿಸಲಾಗಿ ಇದರಲ್ಲಿ ವಿವಾದಿತ ಜಮೀನನ್ನು ನಮ್ಮ ತಂದೆ ಹೆಸರಿನಿಂದ ನಮ್ಮ ತಾಯಿ ಹೆಸರಿನಲ್ಲಿ ಮಾಡಬೇಕು ಎಂಬುದಾಗಿ ಉಲ್ಲೇಖಿಸಿರುವರಾದರೂ ವಿವಾದಿತ ಜಮೀನಿಗೆ ಪೂರಕವಾದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ ವಿಚಾರಣೆಯಲ್ಲಿ ಹಾಜರಿದ್ದು ಯಾವುದೇ ಹೇಳಿಕೆ ಸಹ ನೀಡಿರುವುದಿಲ್ಲ. ಹೀಗಾಗಿ ತಕರಾರು ಹುರುಳಿಲ್ಲದ ತಕರಾರು ಎಂದು ಪರಿಗಣಿಸಲಾಗಿದೆ. ಅಲ್ಲದೆ ವಿಲ್ ದಸ್ತಾವೇಜು ನೊಂದಣಿಯಾಗಿರುವುದಿರಂದ ಪ್ರತಿವಾದಿಗಳು ಈ ಬಗ್ಗೆ ತಮ್ಮ ವಾದವನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮಂಡಿಸಿಕೊಂಡು ಇತ್ಯರ್ಥಪಡಿಸಿಕೊಳ್ಳಲು ನಿರ್ದೇಶಿಸುತ್ತ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನುಗಳು ಸ.ನಂ. 215/A ಪೈಕಿ ವಿಸ್ತೀರ್ಣ 5–89, ಸ.ನಂ. 217/B/1 ವಿಸ್ತೀರ್ಣ 3–38 ಎಕರೆ ಜಮೀನನ್ನು ನೊಂದಾಯಿತ ವಿಲ್ ದಸ್ತಾವೇಜು ಪ್ರಕಾರ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 128 ಹಾಗೂ 129 ರನ್ವಯ ವಿಲ್‌ದಾರರಾದ ದೀಕ್ಷಿತ್ ಲಮಾಣಿ ಉರ್ಫ್ ದೀಕ್ಷಿತ್ ರಾಠೋಡ್ ಮೈನರ್ ಗಾರ್ಡಿಯನ್ ತಾಯಿ ಪುಷ್ಪಾವತಿ ಗಂಡ ಚಂದ್ರಶೇಖರ್ ಲಮಾಣಿ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 19.5.2016 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :–
1) ವಾದಿ + ಪ್ರತಿವಾದಿಗಳು
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ